ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

## ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-263462
ಫ್ಯಾಕ್ಸ್ : 08192 - 260969
ಏಪ್ರಿಲ್ - ಜೂನ್ - 2009

ತ್ರೈಮಾಸಿಕ ಪತ್ರಿಕೆ
(Quarterly News Letter)

ಮಿಂಚಂಚೆ: dvgtkvk@yahoo.com
ಸಂಪುಟ 2. ಸಂಚಿಕೆ : 3

### ಸಿಂಚನಕ್ಕೆ ಮುನ್ನ:

ಪ್ರಿಯ ಬಂಧುಗಳೇ,

ಮಳೆಗಾಲ ಶುರುವಾಗಿದೆ. ಮಳೆ ಬೀಳುವ ಪ್ರಮಾಣ ಕಡಿಮೆ ಇರೋದ್ರಿಂದ ವಿದ್ಯುಚ್ಛಕ್ತಿ ಉತ್ಪಾದನೆಗೆ ತೊಂದರೆ ಆಗಿದೆ. ಇದರ ನೇರ ಪರಿಣಾಮ ಜನಸಾಮಾನ್ಯರ ದೈನಂದಿನ ಚಟುವಟಿಕೆಗಳ ಮೇಲೆ ಆಗುತ್ತಿದೆ. 'Power' ಇದ್ರೆ 'Powerful', ಇಲ್ಲಾಂದ್ರೆ 'Powerless' ಆಗಿಬಿಡ್ತೀವಿ ನಾವು. ಇನ್ನು ಮುಂದಿರುವ ಮುಂಗಾರು ತಿಂಗಳುಗಳಲ್ಲಿ ಸರಿಯಾದ ಪ್ರಮಾಣದ ಮಳೆ ಸಕಾಲಕ್ಕೆ ಬರಲಿ ಎಂದು ಪ್ರಕೃತಿ ದೇವರಲ್ಲಿ ಪ್ರಾರ್ಥಿಸೋಣ.

ಕಳೆದ ಮೂರು ತಿಂಗಳುಗಳಲ್ಲಿ ಈ ವರ್ಷದ ಪೂರ್ಣ ಹಂಗಾಮಿಗೆ ಸಲ್ಲುವ ಅನೇಕ ಮುಂಚೂಣಿ ಪ್ರಾತ್ಯಕ್ಷಿಕೆಗಳು ಮತ್ತು ಕ್ಷೇತ್ರ ಪ್ರಯೋಗಗಳ ಯೋಜನೆ ತಯಾರಿಸಿ, ಅನುಷ್ಠಾನಕ್ಕೆ ಎಲ್ಲ ತಯಾರಿ ಮಾಡಿಕೊಂಡಿದ್ದೇವೆ. ಈ ಪತ್ರಿಕೆ ನಿಮ್ಮ ಕೈ ಸೇರುವ ಹೊತ್ತಿಗೆ, ಬಹುತೇಕ ಅನುಷ್ಠಾನ ಕಾರ್ಯಗಳು ಮುಗಿದಿರುತ್ತವೆ. ಕಳೆದ ವರ್ಷದ ಚಟುವಟಿಕೆಗಳ ಫಲಿತಾಂಶಗಳ ಕ್ರೋಢಿಕರಣ ಮತ್ತು ತುಲನಾ ಕಾರ್ಯವನ್ನು ಮುಗಿಸಿದ್ದಾಯ್ತು. ಜೈವಿಕ ತಂತ್ರಜ್ಞಾನ ಇಲಾಖೆ, ನವದೆಹಲಿ ಇವರ ಅನುದಾನದಲ್ಲಿ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಜೀವನೋಪಾಯ ಮಾರ್ಗಗಳನ್ನು ಕಂಡುಕೊಳ್ಳುವ ಮಹತ್ವದ ಯೋಜನೆಯೊಂದನ್ನು ನಮ್ಮ ತಂಡ ಅನುಷ್ಠಾನಗೊಳಿಸುತ್ತಿದೆ. ಜೊತೆಗೆ ರೈತೋಪಯೋಗಿ ತಂತ್ರಜ್ಞಾನಗಳ ಗುರುತಿಸುವಿಕೆ ಮತ್ತು ಅವುಗಳ ಸತತ ಸಂಸ್ಕರಣೆಯ ಕಾರ್ಯದಲ್ಲಿ ನಮ್ಮ ತಂಡ ನಿರತವಾಗಿದ್ದು, ಅನೇಕ ಕೌಶಲ್ಯವರ್ಧಿತ ತರಬೇತಿಗಳು, ಕಾರ್ಯಾಗಾರಗಳು, ಕ್ಷೇತ್ರಭೇಟಿಗಳು, ಸಂವಾದಗಳು ಹೀಗೆ ಹಲವಾರು ಚಟುವಟಿಕೆಗಳಿಂದ ಭರಿತವಾಗಿದೆ.

ಇಷ್ಟೆಲ್ಲಾ ಕೈ-ಮೈ-ಮನಸ್ಸುಗಳ ತುಂಬಾ ಕೆಲಸಗಳಲ್ಲಿ ಮಗ್ನರಾಗಿರುವ ನಮ್ಮ ತಂಡಕ್ಕೆ ಶ್ರೀ ಜಗದ್ಗುರುಗಳ ಕೃಪಾಶೀರ್ವಾದ ಮತ್ತು ನಿಮ್ಮೆಲ್ಲರ ಶುಭ ಹಾರೈಕೆಗಳು ಅತ್ಯಗತ್ಯ. ಅಂತೆಯೇ, ಈ ಮಳೆಗಾಲವು ಸುಭೀಕ್ಷತೆಯನ್ನು ಹೆಚ್ಚಿಸಲಿ ಎಂದು ಆಶಿಸುತ್ತೇನೆ.

**–ಡಾ. ದೇವರಾಜ ಟಿ.ಎನ್.**

### ವೈಜ್ಞಾನಿಕ ಸಲಹಾ ಸಮಿತಿ ಸಭೆ



- ದಿನಾಂಕ 22-05-2009 ರಂದು ವೈಜ್ಞಾನಿಕ ಸಲಹಾ ಸಮಿತಿ ಸಭೆಯನ್ನು ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಡಾ. ಎಂ.ಎನ್. ಕುಲಕರ್ಣಿ, ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸದಸ್ಯರು, ಸಿರಿಗೆರೆ ಇವರು ವಹಿಸಿದ್ದರು. ಇದರಲ್ಲಿ ಕೇಂದ್ರದ ಹಿಂದಿನ 6 ತಿಂಗಳಲ್ಲಿ (ಹಿಂಗಾರು) ಹಮ್ಮಿಕೊಂಡಿದ್ದ ಕಾರ್ಯಚಟುವಟಿಕೆಗಳನ್ನು ಹಾಗೂ ಮುಂದಿನ 6 ತಿಂಗಳ (ಮುಂಗಾರು) ಕ್ರಿಯಾಯೋಜನೆಯನ್ನು ಮಂಡಿಸಲಾಯಿತು.

### ಹಮ್ಮಿಕೊಂಡ ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು:




- ಜಿಲ್ಲಾ ಜಲಾನಯನ ಇಲಾಖೆ ಪ್ರಾಯೋಜಿತ 'ಮಳೆನೀರು ಕೊಯ್ಲು ವಿನ್ಯಾಸಗಳಲ್ಲಿ ಮೀನು ಸಾಕಾಣಿಕೆ' ಕುರಿತು ಕೃಷಿ ಹೊಂಡವುಳ್ಳ ಜಗಳೂರು, ದಾವಣಗೆರೆ ಹಾಗೂ ಹರಪನಹಳ್ಳಿ ತಾಲ್ಲೂಕಿನ ರೈತರಿಗೆ 25-06-2009 ಮತ್ತು 26-06-2009 ರಂದು ಕೇಂದ್ರದ ಮುಖ್ಯಸ್ಥರಾದ ಡಾ. ದೇವರಾಜರವರು ಒಂದು ದಿನದ ತರಬೇತಿಯನ್ನು ನೀಡಿರುತ್ತಾರೆ.

**ಕೇಂದ್ರದ ವಿಜ್ಞಾನಿಗಳು ಭಾಗವಹಿಸಿದ ಕಾರ್ಯಗಾರಗಳು/ಕಮ್ಮಟಗಳು/ವಿಚಾರಸಂಕಿರಣಗಳು/ಸಭೆಗಳು/ತರಬೇತಿ ಕಾರ್ಯಕ್ರಮಗಳು :**

- ದಿನಾಂಕ 17-04-2009 ರಂದು ಬಿ.ಐ.ಇ.ಟಿ., ದಾವಣಗೆರೆಯಲ್ಲಿ ಆಯೋಜಿಸಿದ್ದ Symposium on 'Recent Advances in Biotechnology' ಡಾ. ಪ್ರದೀಪ್ ಹೆಚ್.ಎಂ., ಶ್ರೀ ರಘುರಾಜ ಜೆ. ಮತ್ತು ಶ್ರೀ ವಿಜಯಕುಮಾರ್ ಎಸ್. ಬಿ. ಭಾಗವಹಿಸಿದ್ದರು.
- ದಿನಾಂಕ 4-05-2009 ರಿಂದ 6-05-2009 ರವರೆಗೆ ಬೆಂಗಳೂರಿನ ವಲಯ ಯೋಜನಾ ನಿರ್ದೇಶಕರ ಘಟಕದಲ್ಲಿ ನಡೆದ 2009-10ನೇ ಸಾಲಿನ ಕಾರ್ಯಯೋಜನೆ ಸಭೆಯಲ್ಲಿ ಮುಂದಿನ ವರ್ಷದ ಕ್ರಿಯಾ ಯೋಜನೆಯನ್ನು ಕೇಂದ್ರದ ಮುಖ್ಯಸ್ಥರಾದ ಡಾ. ದೇವರಾಜ ಟಿ.ಎನ್. ಇವರು ಮಂಡಿಸಿರುತ್ತಾರೆ.
- ದಿನಾಂಕ 14-05-2009 ರಂದು ಕೇಂದ್ರದ ಡಾ.ಜಯದೇವಪ್ಪ ಜಿ.ಕೆ. ಹಾಗೂ ಡಾ. ಪ್ರದೀಪ್ ರವರು ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನಲ್ಲಿ ನಡೆದ 'Bioavailability of Silicon and its role in human health' ಕುರಿತ ಉಪನ್ಯಾಸ ಶಿಬಿರದಲ್ಲಿ ಭಾಗವಹಿಸಿರುತ್ತಾರೆ.
- ದಿನಾಂಕ 2-06-2009 ರಿಂದ 4-06-2009 ರವರೆಗೆ ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಇವರು ಆಯೋಜಿಸಿದ್ದ ಮೂರು ದಿನಗಳ "Gender Sensitization Modules for Cutting Edge Level Extension Functioneries" ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ವಿಸ್ತರಣಾ ತಜ್ಞರಾದ ಶ್ರೀ ರಘುರಾಜ ಜೆ. ಮತ್ತು ಗೃಹ ವಿಜ್ಞಾನಿ ಕುಮಾರಿ ಕವಿತಾ ಪಿ. ಭಾಗವಹಿಸಿದ್ದರು.
- ದಿನಾಂಕ 10.6.2009 ರಿಂದ 12.06.2009 ರವರೆಗೆ ಕೃಷಿ ವಿಶ್ವ ವಿದ್ಯಾನಿಲಯ ಧಾರವಾಡದಲ್ಲಿ ನಡೆದ 'ಹತ್ತಿ, ಎಣ್ಣೆಕಾಳು ಮತ್ತು ದ್ವಿದಳ ಧಾನ್ಯಗಳ ವಾರ್ಷಿಕ ಪ್ರಾತ್ಯಕ್ಷಿಕೆಗಳ ಪರಿಶೀಲನೆ ಹಾಗೂ ಕ್ರಿಯಾಯೋಜನೆ 2009'ರ ಕಾರ್ಯಕ್ರಮದಲ್ಲಿ ಕೇಂದ್ರದ ಬೇಸಾಯ ತಜ್ಞರಾದ ಶ್ರೀ ಮಲ್ಲಿಕಾರ್ಜುನ ಬಿ.ಓ. ಮತ್ತು ಮಣ್ಣು ವಿಜ್ಞಾನಿಯಾದ ಡಾ. ಪ್ರದೀಪ್ ಹೆಚ್. ಎಂ. ಭಾಗವಹಿಸಿ ವರದಿ ಮಂಡಿಸಿರುತ್ತಾರೆ.
- ದಿನಾಂಕ 20-06-2009 ರಂದು ಕೃಷಿ ಸಂಶೋಧನಾ ಕೇಂದ್ರ, ಅರಸಿಕೆರೆಗೆ ಕೇಂದ್ರದ ಸಸ್ಯಸಂರಕ್ಷಣಾ ತಜ್ಞ ಪ್ರಸನ್ನಕುಮಾರ ಎನ್. ಭೇಟಿ ನೀಡಿ ಟ್ರೈಕೋಡರ್ಮ ಉತ್ಪಾದನೆ ಬಗ್ಗೆ ತಾಂತ್ರಿಕ ಮಾಹಿತಿ ಪಡೆದರು.

**ಸಂಪನ್ಮೂಲ ವ್ಯಕ್ತಿಗಳಾಗಿ ಕೇಂದ್ರದ ವಿಜ್ಞಾನಿಗಳು:**

- ದಿನಾಂಕ 03-04-2009 ರಂದು ಕೇಂದ್ರದ ಗೃಹ ವಿಜ್ಞಾನಿಯಾದ ಕುಮಾರಿ ಕವಿತಾರವರು ಜಿಲ್ಲಾ ಕೃಷಿ ತರಬೇತಿ ಕೇಂದ್ರ ಕಾಡಜ್ಜಿಯಲ್ಲಿ ನಡೆದ 'ದಿನ ನಿತ್ಯದ ಆಹಾರದಲ್ಲಿ ಮೆಕ್ಕಜೋಳದಲ್ಲಿನ ಪೋಷಕಾಂಶಗಳ ಮಹತ್ವ ಮತ್ತು ಅದರ ಮೌಲ್ಯವರ್ಧಿತ ಪದಾರ್ಥಗಳ ತಯಾರಿಕೆ' ಬಗ್ಗೆ ಉಪನ್ಯಾಸ ನೀಡಿದರು.
- ದಿನಾಂಕ 08-04-2009 ರಂದು ಕೇಂದ್ರದ ಮಣ್ಣು ವಿಜ್ಞಾನಿಯಾದ ಡಾ. ಪ್ರದೀಪ್ ಹೆಚ್.ಎಂ. ಇವರು ಸಿರಿಗೆರೆಯಲ್ಲಿ ನಡೆದ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದ B.Ed. ವಿದ್ಯಾರ್ಥಿಗಳಿಗೆ ನಡೆಸಿದ ಪೌರ ಶಿಕ್ಷಣ ಶಿಬಿರದಲ್ಲಿ ಪಾಲ್ಗೊಂಡು 'ಕೃಷಿಯಲ್ಲಿ ಮಣ್ಣಿನ ಮಹತ್ವ ಮತ್ತು ಅದರ ರಕ್ಷಣೆ' ಬಗ್ಗೆ ಉಪನ್ಯಾಸ ನೀಡಿದರು.
- ದಿನಾಂಕ 13-04-2009 ರಂದು ಹಿರಿಯೂರು ಗ್ರಾಮ ಹೊಳಲ್ಕೆರೆ ತಾ|| ಕೇಂದ್ರದ ವಿಸ್ತರಣಾ ತಜ್ಞರಾದ ಶ್ರೀ ರಘುರಾಜ ಜೆ.ರವರು ಎನ್.ಎಸ್.ಎಸ್. ಶಿಬಿರದಲ್ಲಿ ಭಾಗವಹಿಸಿ 'ಪ್ರಸ್ತುತ ಕೃಷಿ ಕ್ಷೇತ್ರದ ಕ್ಲಿಷ್ಟ ಪರಿಸ್ಥಿತಿಗಳು ಮತ್ತು ಅವುಗಳ ನಿರ್ವಹಣೆ' ಬಗ್ಗೆ ಉಪನ್ಯಾಸ ನೀಡಿದರು.
- ದಿನಾಂಕ 24-04-2009 ರಂದು ಕೇಂದ್ರದ ಸಸ್ಯಸಂರಕ್ಷಣಾ ತಜ್ಞರಾದ ಶ್ರೀ ಪ್ರಸನ್ನಕುಮಾರ ಎನ್. ರವರು ದ್ವೈಮಾಸಿಕ ಕಾರ್ಯಗಾರದಲ್ಲಿ ಕೃಷಿ ಇಲಾಖೆ ದಾವಣಗೆರೆಯಲ್ಲಿ ಆಯೋಜಿಸಿದ " ವಿವಿಧ ಬೆಳೆಗಳ ರೋಗ ಮತ್ತು ಕೀಟಗಳ ಹತೋಟಿ" ಯ ಬಗ್ಗೆ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ಮಾಹಿತಿ ನೀಡಿದರು
- ದಿನಾಂಕ 12-05-2009 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿಯಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ಸಸ್ಯ ಸಂರಕ್ಷಣಾ ತಜ್ಞರಾದ ಶ್ರೀ ಪ್ರಸನ್ನಕುಮಾರ ರವರು 'ದ್ವಿದಳ ಧಾನ್ಯಗಳಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ' ಬಗ್ಗೆ ಉಪನ್ಯಾಸ ನೀಡಿದರು

**ಆಕಾಶವಾಣಿ ಭದ್ರಾವತಿಯಲ್ಲ ಬಿತ್ತರಗೊಂಡ ಕಾರ್ಯಕ್ರಮಗಳು:**

- ದಿನಾಂಕ 12-05-2009 ರಂದು 'ಪಶು ಸಂಗೋಪನೆಯಲ್ಲಿ ಜೀವ ವಿಮಾ ಸೌಲಭ್ಯಗಳು' ಡಾ. ಜಯದೇವಪ್ಪ ಜಿ.ಕೆ.
- ದಿನಾಂಕ 24-05-2009 ರಂದು 'ಸಿಹಿ ನೀರಿನ ಸೀಗಡಿ ಸಾಕಾಣಿಕೆ' ಡಾ. ದೇವರಾಜ ಟಿ.ಎನ್.

**ಆಚರಿಸಿದ ವಿಶೇಷ ಕಾರ್ಯಕ್ರಮಗಳು:**



- ಕೇಂದ್ರದಲ್ಲಿ ದಿನಾಂಕ 29-04-2009 ರಂದು 'ಸುರಕ್ಷಿತ ಕುಡಿಯುವ ನೀರಿನ ಯೋಜನೆ' ಬಗ್ಗೆ ಶ್ರೀಮತಿ ಗಾಯತ್ರಿ ಹೆಚ್.ವಿ., ನಾಂದಿ ಸಂಸ್ಥೆ, ಹೈದರಾಬಾದ್ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳು, ಸರ್ಕಾರೇತರ ಸಂಸ್ಥೆ ಸದಸ್ಯರು, ಗ್ರಾಮಪಂಚಾಯಿತಿ ಸದಸ್ಯರು ಮತ್ತು ಪ್ರಗತಿಪರ ರೈತರು ಭಾಗವಹಿಸಿದ್ದರು.
- ದಿನಾಂಕ 11-06-2009 ಕೇಂದ್ರದ ಸಹಯೋಗದಲ್ಲಿ ಶ್ರೀಮತಿ ಗಾಯತ್ರಿ ಹೆಚ್. ವಿ., ನಾಂದಿ ಸಂಸ್ಥೆ, ಹೈದರಾಬಾದ್ ಇವರು ಜಿಲ್ಲಾ ಪಂಚಾಯತ್, ದಾವಣಗೆರೆಯಲ್ಲಿ 'ಸುರಕ್ಷಿತ ಕುಡಿಯುವ ನೀರಿನ ಯೋಜನೆ' ಬಗ್ಗೆ ಉಪನ್ಯಾಸ ನೀಡಿದರು.



- ಕೇಂದ್ರದಲ್ಲಿ ದಿನಾಂಕ 23-06-2009 ರಂದು 'Inclusive advancement through technology deployment' ಬಗ್ಗೆ ಡಾ. ಪಟಾಣಕರ್ ಎ.ಎಂ., ಭಾಭಾ ಅಣು ಸಂಶೋಧನಾ ಕೇಂದ್ರ (BARC) ಮುಂಬೈ ಇವರು ಉಪನ್ಯಾಸ ನೀಡಿದರು.

## ರೈತಕ್ಷೇತ್ರ ಪಾಠಶಾಲೆ

- ದಾವಣಗೆರೆ ತಾಲ್ಲೂಕಿನ ಹಳೆ ಬಿಸಲೇರಿ ಗ್ರಾಮದಲ್ಲಿ ದಿನಾಂಕ 27-06-2009 ರಂದು 'ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ' ಕುರಿತು ರೈತಕ್ಷೇತ್ರ ಪಾಠಶಾಲೆಯನ್ನು ಆಸಕ್ತ 25 ರೈತರಿಗೆ ಪ್ರಾರಂಭಿಸಲಾಗಿದೆ.

## ಕೃಷಿ ಮುನ್ಸೂಚನೆಗಳು:

### ಬೇಸಾಯ ಶಾಸ್ತ್ರ, ಮಣ್ಣು ವಿಜ್ಞಾನ ಮತ್ತು ಸಸ್ಯ ಸಂರಕ್ಷಣೆ ವಿಭಾಗ

### ಮೆಕ್ಕೆಜೋಳ ಮತ್ತು ರಾಗಿ:

- ಮುಂಗಾರು ಹಂಗಾಮಿನಲ್ಲಿ ಮಳೆ ವಿಳಂಬವಾಗಿರುವ ಹಿನ್ನೆಲೆಯಲ್ಲಿ ರೈತರು ಮೇಲಿಂದ ಮೇಲೆ ಎಡೆ ಹೊಡೆಯುವ ಮೂಲಕ ಬೆಳೆಗಳ ಸಾಲುಗಳ ಮಧ್ಯೆ ಮಣ್ಣಿನ ಹೊದಿಕೆ ಮಾಡಿ, ಬೆಳೆಯ ಬುಡಕ್ಕೆ ಮಣ್ಣು ಏರುಹಾಕಬೇಕು. ಇದರಿಂದ ತೇವಾಂಶಗಳ ಕೊರತೆಯಿಂದ ಬೆಳೆ ಬಾಡುವುದನ್ನು ತಡೆಯಬಹುದು.
- ಮೆಕ್ಕೆ ಜೋಳವನ್ನು ಬೆಳೆಯುವ ರೈತರು ಶಿಫಾರಸ್ಸು ಮಾಡಿದ ರಸಗೊಬ್ಬರದ ಜೊತೆಗೆ ಪ್ರತಿಹೆಕ್ಟೇರಿಗೆ 10 ಕೆಜಿ ನಂತೆ ಸತುವಿನ ಸಲ್ಫೇಟ್ ಗೊಬ್ಬರವನ್ನು ಬಿತ್ತನೆ ಸಮಯದಲ್ಲಿ ಕೊಡಬೇಕು. ಇದರಿಂದ ಇಳುವರಿ ಶೇ 15-20 ರಷ್ಟು ಹೆಚ್ಚಾಗುತ್ತದೆ.
  ಮೆಕ್ಕೆಜೋಳದ ಜಮೀನಿನಲ್ಲಿ ನೀರು ನಿಂತಿರುವ ಪ್ರದೇಶಗಳಲ್ಲಿ ಬಸಿಗಾಲುವೆಗಳ ಮೂಲಕ ಹೆಚ್ಚಿನ ನೀರನ್ನು ಹೊರಹಾಕಬೇಕು.
- ಮೆಕ್ಕೆಜೋಳದ ಬಿತ್ತನೆ ಪ್ರಾರಂಭವಾಗಿದ್ದು ಬೂಜು/ಕೇದಿಗೆ ರೋಗ ಕಾಣಿಸುವ ಸಾಧ್ಯತೆಗಳಿದ್ದು ರೈತರು ಪ್ರತಿ ಕೆಜಿ ಬೀಜಕ್ಕೆ 3 ಗ್ರಾಂ. ರಿಡೋಮಿಲ್ ಎಂ.ಜಡ್.ನಿಂದ ಬೀಜೋಪಚಾರ ಮಾಡಬೇಕು.
  ಮೆಕ್ಕೆಜೋಳದಲ್ಲಿ 50% ಸಾರಜನಕವನ್ನು ಮೇಲು ಗೊಬ್ಬರವಾಗಿ ಕೊಟ್ಟು ಕಳೆ ನಿಯಂತ್ರಣ ಮಾಡಿ.
- ಮೆಕ್ಕೆಜೋಳದಲ್ಲಿ ಕಾಂಡಕೊರಕದ ನಿರ್ವಹಣೆಗೆ ಎಂಡೋಸಲ್ಫಾನ್ 2 ಮಿ.ಲೀ./ಲೀ. ಅಥವಾ ಕಾರ್ಬರಿಲ್ 4ಜಿ 6 ಕೆಜಿ/ಎಕರೆಗೆ ಬಳಸಬೇಕು.
- ರಾಗಿಯಲ್ಲಿ ಅಧಿಕ ಇಳುವರಿ ಕೊಡುವ ಜಿ.ಪಿ.ಯು.-28 ತಳಿಯ ಜೊತೆ ಅವರೆಯನ್ನು ಅಂತರ ಬೆಳೆಯಾಗಿ 4:1 ಅನುಪಾತದಲ್ಲಿ ಬೆಳೆಯಿರಿ.

### ಭತ್ತ:

- ಸಾರಜನಕ ರಸಗೊಬ್ಬರವು ಶೀಘ್ರವಾಗಿ ನೀರಿನಲ್ಲಿ ನಷ್ಟ ಹೊಂದುವುದರಿಂದ ಒಂದೇ ಬಾರಿಗೆ ಕೊಡದೇ ಬೆಳೆಯ ವಿವಿಧ ಹಂತಗಳಲ್ಲಿ ಮೂರು ಕಂತುಗಳಲ್ಲಿ ಕೊಡಬೇಕು. ಮರಳು ಹೆಚ್ಚಾಗಿರುವ ಮಣ್ಣುಗಳಲ್ಲಿ ಪೊಟ್ಯಾಷಿಯಂ ರಸಗೊಬ್ಬರವನ್ನು ಎರಡು ಕಂತುಗಳಲ್ಲಿ ಕೊಡಬೇಕು.
- ಪ್ರತಿ ಮೂರು ಬೆಳೆಗೊಂದು ಸಾರಿ ಎಕರೆಗೆ 8 ಕೆಜಿ ಸತುವಿನ ಸಲ್ಫೇಟ್ ಬಳಸುವುದು ಉತ್ತಮ. ಸತುವಿನ ಸಲ್ಫೇಟನ್ನು ನಾಟಿಗೆ ಮುನ್ನ, ಇತರ ರಸಗೊಬ್ಬರಗಳೊಡನೆ ಬೆರೆಸದೇ ನೇರವಾಗಿ ಮಣ್ಣಿಗೆ ಸೇರಿಸಬೇಕು.
- ಮೇಲುಗೊಬ್ಬರವನ್ನು ಕೊಡುವುದಕ್ಕಿಂತ ಮುಂಚೆ ಕಳೆ ತೆಗೆಯುವುದರಿಂದ ಕಳೆಗಳು ಪೋಷಕಾಂಶಗಳನ್ನು ಹೀರಿಕೊಳ್ಳುವುದು ತಪ್ಪುತ್ತದೆ.
- ಬೆಂಕಿರೋಗ ಬಾಧೆ ಕಂಡುಬರುವ ಪ್ರದೇಶಗಳಲ್ಲಿ ಮೇಲುಗೊಬ್ಬರವಾಗಿ ಕೊಡುವ ಸಾರಜನಕ ರಸಗೊಬ್ಬರದ ಪ್ರಮಾಣವನ್ನು ಸೇ. 50 ರಷ್ಟು ಕಡಿಮೆ ಮಾಡಬೇಕು ಹಾಗೂ ಪೊಟ್ಯಾಷ್ ಗೊಬ್ಬರವನ್ನು ಹೆಕ್ಟೇರಿಗೆ 25 ಕೆಜಿ ಹೆಚ್ಚು ಮಾಡಬೇಕು. ಬೆಂಕಿ ರೋಗ ನಿರ್ವಹಣೆಗೆ ಕಾರ್ಬನ್‌ಡೈಜಿಮ್ 4 ಗ್ರಾಂ/ಕೆಜಿ ಬೀಜೋಪಚಾರ ಮಾಡಿ ಬಿತ್ತನೆ ಮಾಡಿ, ನಂತರ ರೋಗ ಕಂಡುಬಂದಲ್ಲಿ ನಿರ್ವಹಣೆಗೆ ಕಾರ್ಬನ್‌ಡೈಜಿಮ್ 1 ಗ್ರಾಂ/ಲೀ ಅಥವಾ ಟ್ರೈಸೈಕ್ಲಜೋಲ್ 0.6 ಗ್ರಾಂ/ಲೀ ಸಿಂಪಡಿಸಬೇಕು.
- ಮಣ್ಣು ಪರೀಕ್ಷೆಯ ಆಧಾರದ ಮೇಲೆ ಪ್ರತಿ ಮೂರು ವರ್ಷಕ್ಕೊಮ್ಮೆ ಸುಣ್ಣವನ್ನು ಬಳಸಿ ಹುಳಿ ಮಣ್ಣನ್ನು ಸುಧಾರಿಸುವುದು ಉತ್ತಮ.
- ನಾಟಿ ಮಾಡುವ ಮೂರು ವಾರಗಳ ಮೊದಲು ಎಕರೆಗೆ ಎರಡು ಟನ್ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟನ್ನು ಮಣ್ಣಿಗೆ ಬೆರೆಸಬೇಕು. ಹಸಿರು ಎಲೆ ಗೊಬ್ಬರವನ್ನು ಒದಗಿಸುವುದಾದಲ್ಲಿ ಎಕರೆಗೆ 4 ಟನ್ ಎಲೆ ಹಸಿರು ಸೊಪ್ಪನ್ನು ಮಣ್ಣಿಗೆ ಸೇರಿಸಬೇಕು.
- ನಾಟಿಗೆ 22-25 ದಿನ ವಯಸ್ಸಿನ ಸದೃಢವಾಗಿ ಬೆಳೆದ ಸಸಿಗಳನ್ನು ಬಳಸಬೇಕು. ಅನಿವಾರ್ಯವಾದ ಸನ್ನಿವೇಶಗಳಲ್ಲಿ 30-35 ದಿವಸಗಳ ಸಸಿಯನ್ನು ಬಳಸಬಹುದು.
- ಅಜೋಸ್ಪೈರಿಲಂ ಜೈವಿಕ ಗೊಬ್ಬರ ಬಳಕೆ ಇದನ್ನು ಮೂರು ಹಂತಗಳಲ್ಲಿ ಬಳಸಬಹುದು.
  - ಎಕರೆ ಪ್ರದೇಶಕ್ಕೆ ಬೇಕಾಗುವ ಬಿತ್ತನೆ ಬೀಜವನ್ನು 400 ಗ್ರಾಂ ಅಜೋಸ್ಪೈರಿಲಂ ಜೊತೆಗೆ ಉಪಚರಿಸುವುದು.
  - ಸಸಿ ಮಡಿಯಿಂದ ಸಸಿಗಳನ್ನು ಕಿತ್ತ ನಂತರ ಸಸಿ ಬೇರುಗಳನ್ನು 400 ಗ್ರಾಂ ಅಜೋಸ್ಪೈರಿಲಂ ಗೊಬ್ಬರದ ಮಿಶ್ರಣದಲ್ಲಿ ಅದ್ದಿ ನಾಟಿ ಮಾಡುವುದು.
  - 800 ಗ್ರಾಂ ಅಜೋಸ್ಪೇರಿಲಂ ಜೈವಿಕ ಗೊಬ್ಬರವನ್ನು ನುಣ್ಣನೆ ಪುಡಿ ಮಾಡಿದ 10 ಕೆಜಿ ಕೊಟ್ಟಿಗೆ ಗೊಬ್ಬರ ಮತ್ತು 10 ಕೆಜಿ ಮಣ್ಣಿನೊಡನೆ ಬೆರೆಸಿ ಒಂದು ಎಕರೆ ನಾಟಿ ಮಾಡುವ ಪ್ರದೇಶಕ್ಕೆ ನೇರವಾಗಿ ಎರಚಿ ಉಳುಮೆ ಮಾಡುವುದು.
- ಭತ್ತದಲ್ಲಿ ಎಲೆ ಸುತ್ತುವ ಹುಳು, ಕಾಂಡಕೊರಕ ಮತ್ತು ಕಂದು ಜಿಗಿ ಕೀಟದ ಬಾಧೆ ಕಾಣಿಸಿಕೊಳ್ಳುವ ಸಂಭವವಿದೆ. ಎಲೆ ಸುರಳಿ ಕೀಟ ಮತ್ತು ಕಾಂಡ ಕೊರೆಯುವ ಕೀಟಗಳ ನಿರ್ವಹಣೆಗಾಗಿ ಬೇವು ಆಧಾರಿತ ಕೀಟನಾಶಕ ಅಜಾಡಿರಕ್ಟಿನ್ 300 ಪಿ.ಪಿ.ಎಂ. ಆದಲ್ಲಿ 5 ಮಿ.ಲೀ. ಅಥವಾ ಅಜಾಡಿರಕ್ಟಿನ್ 1500 ಪಿ.ಪಿ.ಎಂ. ಇದ್ದಲ್ಲಿ 3 ಮಿ.ಲೀ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಕಂದು ಜಿಗಿ ಕೀಟದ ಬಾಧೆ ಕಾಣಿಸಿಕೊಂಡ ಕೂಡಲೇ, ಗದ್ದೆಗಳಿಂದ ನೀರನ್ನು ಬಸಿದು ಬೆಳೆಯ ಬುಡಭಾಗಕ್ಕೆ ಇಮಿಡಾಕ್ಲೋಪ್ರಿಡ್ 0.5 ಮಿ.ಲೀ. ಅಥವಾ ಥಯೋಮೆಥಾಕ್ಸಾಂ 0.5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

## ದ್ವಿದಳ ಮತ್ತು ಎಣ್ಣೆಕಾಳು ಬೆಳೆಗಳು:

- ತೊಗರಿಯ 2 ಸಾಲಿನ ಮಧ್ಯದಲ್ಲಿ ಎಡೆ ಹೊಡೆದು ಪಾತಿ ಮಾಡುವುದರಿಂದ ತೇವಾಂಶವನ್ನು ಕಾಪಾಡಿಕೊಳ್ಳಬಹುದು.
- ಶೇಂಗಾದಲ್ಲಿ (ಜಿಪಿಬಿಡಿ-4) ತಳಿಯನ್ನು ಬಿತ್ತನೆ ಮಾಡುವುದರಿಂದ ಎಲೆಚುಕ್ಕೆ ರೋಗವನ್ನು ತಡೆಯಬಹುದು. ಶೇಂಗಾ ಬೆಳೆಯುವ ರೈತರು ಬಿತ್ತನೆ ಬೀಜವನ್ನು ಜೈವಿಕ ಗೊಬ್ಬರಗಳಾದ ರೈಜೋಬಿಯಂ ಮತ್ತು ರಂಜಕ ಕರಗಿಸುವ ಗೊಬ್ಬರದಿಂದ ಪ್ರತಿ ಹೆಕ್ಟೇರಿಗೆ ಬೀಜಕ್ಕೆ 375 ಗ್ರಾಂ ನಂತೆ ಬೀಜೋಪಚಾರ ಮಾಡಿ ಬಿತ್ತನೆ ಮಾಡಬೇಕು ಮತ್ತು ಬಿತ್ತನೆ ಮಾಡಿದ ಒಂದು ತಿಂಗಳ ನಂತರ ಹೆಕ್ಟೇರಿಗೆ 500 ಕಿ.ಗ್ರಾಂ. ಜಿಪ್ಸಂನ್ನು ಮಣ್ಣಿಗೆ ಸೇರಿಸಬೇಕು. ಎಕರೆಗೆ 200 ಕೆಜಿ ಜಿಪ್ಸಂ ಬಿತ್ತನೆ ಸಮಯದಲ್ಲಿ ಬಳಸಿ.
- ಸೂರ್ಯಕಾಂತಿಯು ಹೂವಿನ ಹಂತದಲ್ಲಿರುವಾಗ ಶೇ. 2 ರಷ್ಟು ಬೋರಾನ್ ಪೋಷಕಾಂಶದ ಸಿಂಪರಣೆಯನ್ನು ಕೊಡಬೇಕು. ಇದರಿಂದ ಹೂವಿನಲ್ಲಿ ಕಾಳು ಕಟ್ಟುವಿಕೆ ಪ್ರಮಾಣ ಹೆಚ್ಚಾಗಿ ಕಾಳಿನ ತೂಕ ಹೆಚ್ಚಾಗುವುದು.
- ಸೂರ್ಯಕಾಂತಿಯ ನಂಜುರೋಗ ನಿರ್ವಹಣೆಗೆ ಗೌಚ್‌ನಿಂದ ಬೀಜೋಪಚಾರ ಮಾಡಿದ ಬಿತ್ತನೆ ಬೀಜ ಬಳಕೆ ಮಾಡಿ, ನಂತರ ಇಮಿಡಾಕ್ಲೋಪ್ರಿಡ್ 0.5 ಮಿ.ಲೀ./ಲೀ. ಸಿಂಪಡಿಸಬೇಕು.

## ಹತ್ತಿ :

- **ಬಿತ್ತುವ ಸಮಯದಲ್ಲಿ :** 50 ಕೆಜಿ ಡಿ.ಎ.ಪಿ. + 15 ಕೆಜಿ ಯೂರಿಯಾ + 25 ಕೆಜಿ ಪೊಟ್ಯಾಷ್
- **ರಸ ಹೀರುವ ಕೀಟಗಳ ನಿರ್ವಹಣೆ:** ಹತ್ತಿಯಲ್ಲಿ ಸಾಲು ಬಿಟ್ಟು ಸಾಲು ನೀರನ್ನು ಹಾಯಿಸಿ. ಹತ್ತಿಯಲ್ಲಿ ರಸಹೀರುವ ಕೀಟಗಳ (ಸಸ್ಯ ಹೇನು, ಥ್ರಿಪ್ಸ್, ಬಿಳಿನೊಣ ಮತ್ತು ಹಸಿರು ಜಿಗಿ) ಹತೋಟಿಗೆ ಇಮಿಡಾಕ್ಲೋಪ್ರಿಡ್ 17.8 ಎಸ್‌ಎಲ್ 0.5 ಮಿ.ಲೀ./ಲೀ. ಅಥವಾ ಅಸಿಟಾಮಿಪ್ರಿಡ್ 20 ಎಸ್‌ಪಿ 0.2 ಗ್ರಾಂ/ಲೀ. ಸಿಂಪಡಿಸಬೇಕು.
- **ಗೊಬ್ಬರ ಬಳಕೆ:** ಬಿತ್ತನೆಗೆ 3-4 ವಾರ ಮೊದಲು ಎಕರೆಗೆ 4-5 ಟನ್ ಕಳಿತ ಕೊಟ್ಟಿಗೆ ಗೊಬ್ಬರವನ್ನು ಹೊಲಕ್ಕೆ ಹಾಕಿ ಚೆನ್ನಾಗಿ ಮಿಶ್ರಮಾಡಿ.
- **ಪ್ಲಾನೋಫಿಕ್ಸ್ ಬಳಕೆ:** ಹತ್ತಿಯಲ್ಲಿ ಹೂ ಬಿಡಲು ಪ್ರಾರಂಭವಾದಾಗ ಒಮ್ಮೆ ಹಾಗೂ ಪೂರ್ತಿ ಹೂ ಅರಳಿದಾಗ 5 ಮಿ.ಲೀ. ಪ್ಲಾನೋಫಿಕ್ಸ್ 15 ಲೀಟರ್ (ಒಂದು ಕ್ಯಾನ್) ನೀರಿನಲ್ಲಿ ಕರಗಿಸಿ ಸಿಂಪಡಿಸುವುದು. ಇದರಿಂದ ಹೂ ಉದುರುವುದು ನಿಲ್ಲುತ್ತದೆ.
- **ಬಿತ್ತಿದ ೫೦ ದಿನಗಳ ನಂತರ :** 35 ಕೆಜಿ ಯೂರಿಯಾ + 15 ಕೆಜಿ ಪೊಟ್ಯಾಷ್
- **ಬಿತ್ತಿದ ೮೦ ದಿನಗಳ ನಂತರ :** 35 ಕೆಜಿ ಯೂರಿಯಾ
- ಶೇ. 2ರಷ್ಟು ಯೂರಿಯಾ ಅಥವಾ ಡಿ.ಎ.ಪಿ. ಗೊಬ್ಬರವನ್ನು ಸಿಂಪರಣೆ (20 ಗ್ರಾಂ ಪ್ರತಿ ಲೀಟರ್ ನೀರಿಗೆ) ಮೂಲಕ 15 ದಿವಸಗಳ ಅಂತರದಲ್ಲಿ ಬಿತ್ತನೆಯಾದ 110-120 ದಿನಗಳ ನಂತರ ಎರಡು ಬಾರಿ ಒದಗಿಸಿ.

## ತೋಟಗಾರಿಕೆ:

- ಅಡಿಕೆ ಬೆಳೆಗೆ ಪ್ರಥಮ ಹಂತದ ರಸಗೊಬ್ಬರ ನೀಡಲು ಸೂಕ್ತ ಸಮಯವಾಗಿದ್ದು, 100:40:140 ಗ್ರಾಂ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಪ್ರತಿ ಗಿಡಕ್ಕೆ ಕೊಡಬೇಕು. ಸಾಕಷ್ಟು ಪ್ರಮಾಣದ ಸಾವಯವ ಗೊಬ್ಬರಗಳನ್ನು (ಕೊಟ್ಟಿಗೆ ಗೊಬ್ಬರ, ಎರೆಹುಳ ಗೊಬ್ಬರ) ಭೂಮಿಗೆ ಸೇರಿಸಬೇಕು.
- ಬಾಳೆ ಬೆಳೆಗೆ ಎಲೆಚುಕ್ಕೆ ರೋಗ ಹಾಗೂ ಕಪ್ಪು ಮೂತಿ ಹುಳದ ಬಾಧೆ ಜಿಲ್ಲೆಯಾದ್ಯಂತ ಹಾನಿಮಾಡುತ್ತಿದ್ದು ಅದರ ಹತೋಟಿಗೆ ಕಾರ್ಬನ್‌ಡೈಜಿಮ್ (ಬೇವಿಸ್ಟಿನ್) 1 ಗ್ರಾಂ/ಲೀ. ನೀರಿಗೆ ಮತ್ತು ಕ್ಲೋರೋ ಫೈರಿಫಾಸ್ 2.5 ಮಿ.ಲೀ./ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.

## ಕೃಷಿ ಹೊಂಡ:

- ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಹೊಲದಲ್ಲಿ ಬಿದ್ದ ಮಳೆನೀರು ಪೋಲಾಗುವುದನ್ನು ತಡೆದು ನಿಲ್ಲಿಸಲು ಕೃಷಿ ಹೊಂಡಗಳು ಅವಶ್ಯಕವಾಗಿವೆ. ಕೃಷಿ ಹೊಂಡಗಳು ನೀರನ್ನು ಇಂಗಿಸಿ ಅಂತರ್ಜಲ ಮಟ್ಟ ಏರಿಸುವುದು ಹಾಗೂ ಕೃಷಿ, ತೋಟಗಾರಿಕೆ ಬೆಳೆಗಳಿಗೆ ಮಿತವಾಗಿ ನೀರನ್ನು ಬಳಸಿ ಪ್ರಯೋಜನ ಪಡೆದುಕೊಳ್ಳಬಹುದು. 30 ಅಡಿ ಅಗಲ X 30 ಅಡಿ ಉದ್ದ X 10 ಅಡಿ ಆಳವಿರುವ ಕೃಷಿ ಹೊಂಡ ತುಂಬಿದಾಗ ಅಂದಾಜು 2,50,000 ಲೀಟರ್‌ಗಳಷ್ಟು ನೀರು ಸಂಗ್ರಹವಾಗುತ್ತದೆ.

## ಮೀನುಕೃಷಿಕರಿಗೆ ಕಿವಿಮಾತು:

- ಮೀನುಮರಿಗಳನ್ನು ಹೊಂಡಗಳಿಗೆ/ಕೆರೆಗಳಿಗೆ ದಾಸ್ತಾನು ಮಾಡಲು ಜೂನ್-ಅಕ್ಟೋಬರ್ ಸಕಾಲ. ವೈಜ್ಞಾನಿಕ ಸಲಹೆ ಪಡೆದು ಸೂಕ್ತ ಸಂಖ್ಯೆಯಲ್ಲಿ ದಾಸ್ತಾನು ಮಾಡಿ.
- ಒಳ್ಳೆಯ ಗುಣಮಟ್ಟದ, ಸೂಕ್ತ ಗಾತ್ರದ ಮರಿಗಳನ್ನು ಆಯ್ಕೆ ಮಾಡಿ.
- ಹೊಂಡಗಳಲ್ಲಿ ಮೀನುಮರಿ ಬಿಡುವ ಮುನ್ನ, ಅನಾವಶ್ಯಕ ಮೀನುಗಳನ್ನು ಕಪ್ಪೆ, ಹಾವು, ಕೀಟಗಳು, ಕಳೆ ಸಸ್ಯಗಳನ್ನು ನಾಶಮಾಡಿ.
- ಸೂಕ್ತ ಪ್ರಮಾಣದಲ್ಲಿ ಕೃಷಿ ಸುಣ್ಣವನ್ನು ಹೊಂಡದ ತಳಭಾಗದಲ್ಲಿ ಚೆಲ್ಲಿ, ರಸಸಾರವನ್ನು ಸರಿಪಡಿಸಿಕೊಳ್ಳಿ.
- ಮರಿ ಬಿಡುವ ವಾರಕ್ಕೆ ಮುನ್ನ, ಸೂಕ್ತ ಪ್ರಮಾಣದ ಸಗಣಿಗೊಬ್ಬರ ಹಾಕಿ, ಪ್ಲಾಂಕ್ಟನ್ ಉತ್ಪಾದನೆ ಮಾಡಿ.
- ಮೀನೇ ಭವಿಷ್ಯ, ಬಂಧುಗಳೇ ಮರೆಯದಿರಿ.
- **'ಸಮಗ್ರ ಸುಸ್ಥಿರ ಮೀನುಕೃಷಿ, ತರುವುದು ಎಲ್ಲರ ಮನಸಲಿ ಖುಷಿ'**

## ಪಶು ಸಂಗೋಪನೆ:

- ಗಿನಿಹುಲ್ಲು ಹಾಗೂ ಕೋ-3 ನೇಪಿಯರ್ ಮೇವಿನ ಬೆಳೆಗಳನ್ನು ನಾಟಿ ಮಾಡಲು ಸೂಕ್ತ ಸಮಯವಾಗಿರುತ್ತದೆ.
- ಅಧಿಕ ಇಳುವರಿ ನೀಡುವ ಹೈನುರಾಸುಗಳಿಗೆ ಪ್ರತಿದಿನ 30-40 ಗ್ರಾಂ ಖನಿಜ ಮಿಶ್ರಣವನ್ನು ದಾಣಿ ಮಿಶ್ರಣದಲ್ಲಿ ಬೆರೆಸಿ ಕೊಡಬೇಕು.
- ಜಾನುವಾರುಗಳಿಗೆ ಜುಲೈ-ಆಗಸ್ಟ್ ತಿಂಗಳಿನಲ್ಲಿ ಕಾಲುಬಾಯಿ ಬೇನೆ ವಿರುದ್ಧ ಲಸಿಕೆ ಹಾಕಿಸಿಕೊಳ್ಳಬೇಕು.

---

ಸಂಪಾದಕರು ಮತ್ತು ಪ್ರಕಾಶಕರು : **ಡಾ|| ದೇವರಾಜ ಟಿ.ಎನ್.**, ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ - 577 002 , ಕರ್ನಾಟಕ
ದೂರವಾಣಿ ಸಂಖ್ಯೆ.: 08192-294568. ಮಿಂಚಂಚೆ : dvgtkvk@yahoo.com
ಸಹ ಸಂಪಾದಕರು : **ಶ್ರೀ ಮಲ್ಲಿಕಾರ್ಜುನ ಬಿ. ಓ., ಶ್ರೀ ಬಸವನಗೌಡ ಎಂ.ಜಿ., ಡಾ|| ಜಯದೇವಪ್ಪ ಜಿ.ಕೆ., ಶ್ರೀ ರಘುರಾಜ ಜೆ., ಶ್ರೀ ಪ್ರಸನ್ನ ಕುಮಾರ ಎನ್., ಡಾ|| ಪ್ರದೀಪ್ ಹೆಚ್. ಎಂ., ಕುಮಾರಿ ಕವಿತಾ ಪಿ., ಶ್ರೀ ವಿಜಯಕುಮಾರ್ ಎಸ್.ಬಿ. ಮತ್ತು ಶ್ರೀ ಸಂತೋಷ್ ಬಿ.**

ಮುದ್ರಕರು : ಅಶ್ವಿನಿ ಪ್ರಿಂಟರ್ಸ್, ದಾವಣಗೆರೆ. ಫೋ: 253341.